**ಓಎಸ್ ಸಂಖ್ಯೆಃ59/2021 ಪಿಡಬ್ಲೂಃ02**

**ದಿನಾಂಕಃ 23-06-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ನಂ. 10 ಮತ್ತು 11 ಪರ ವಕೀಲರಿಂದ**

ಈ ದಿನ ನ್ಯಾಯಾಲಯಕ್ಕೆ ನನ್ನನ್ನು ವಾದಿ ಕರೆದುಕೊಂಡು ಬಂದಿರುತ್ತಾನೆ. ನನಗೆ ನಿಜ ಪರಸ್ಥಿತಿಯ ಬಗ್ಗೆ ಸಾಕ್ಷಿ ನುಡಿಯಲು ಬಾ ಎಂದು ಹೇಳಿದ್ದರಿಂದ ಬಂದಿರುತ್ತೇನೆ. ನನಗೆ ದಾವಾ ಆಸ್ತಿಗಳ ಬಗ್ಗೆ ಸಂಪೂರ್ಣ ಮಾಹಿತಿ ಅಂದರೇ ಯಾವುದು ಪಿತ್ರಾರ್ಜಿತ ಆಸ್ತಿ ಮತ್ತು ಯಾವುದು ಸ್ವಯಾರ್ಜಿತ ಆಸ್ತಿ ಎಂದು ಹೇಳಲು ಬರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ತಂದೆ-ತಾಯಿ ವೀರಪ್ಪ ಮತ್ತು ಚಂದ್ರಮ್ಮ ಇವರು ಕಾಲ ಕಾಲಕ್ಕೆ ಅಪ್ಸಾತ್ ವಾಟ್ನಿ ಪತ್ರ ಮತ್ತು ಮರಣ ಶಾಸನ ಪತ್ರ ಮಾಡಿಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆಭರಣ ಮತ್ತು ಹಣವನ್ನು ಹೆಣ್ಣು ಮಕ್ಕಳಿಗೆ ನನ್ನ ಸಮಕ್ಷಮ ಕೊಟ್ಟಿಲ್ಲ. ಆದರೆ ವೀರಜ್ಜ ಆ ಕುರಿತು ನನಗೆ ಹೇಳುತ್ತಿದ್ದರು.

ಹಲಗೇರಿ ಗ್ರಾಮದ ಸರ್ವೆ ನಂ. 267/2 ಕ್ಷೇತ್ರ 3 ಎಕರೆ 29 ಗುಂಟೆ ಜಮೀನನ್ನು ನನ್ನ ಅಳಿಯನ ಕಡೆ ಖರೀದಿ ಪಡೆದ ಜಮೀನು ಇರುತ್ತದೆ. ಸದರಿ ಆಸ್ತಿಯು ಮೂಲತಃ ವಿರೇಪ್ಪ ಇವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಅದು 5 ಜನರಿಗೆ ಸೇರಿದ ಆಸ್ತಿ ಎಂದು ಹೇಳುತ್ತಾರೆ. ಅದನ್ನು ವೀರಪ್ಪ ರವರು ಮಾತ್ರ ನನಗೆ ಖರೀದಿ ಮಾಡಿ ಕೊಟ್ಟಿರುತ್ತಾರೆಂದರೆ ಸರಿಯಲ್ಲ. 5 ಜನ ಸೇರಿ ಖರಿದಿಗೆ ಕೊಟ್ಟಿರುತ್ತಾರೆಂದರೆಂದು ಹೇಳುತ್ತಾರೆ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಉಳಿದ ಪ್ರತಿವಾದಿಯರನ್ನು ಕೂಗಲಾಗಿ ಮತ್ತು ಅವರ ಪರ ವಕೀಲರನ್ನು ಕೂಗಲಾಗಿ ಗೈರು ಹಾಜರು ಇರುವುದರಿಂದ ಅವರ ಪರ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,**
**ಮತ್ತು ಜೆಎಂಎಫ್‌ಸಿ, ರಾಣೇಬೆನ್ನೂರು.**